# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ:- ಈಗಾಗಲೇ ಚಾಲ್ತಿಯಲ್ಲಿರುವ ಆರೋಗ್ಯ ಇಲಾಖೆಯ ಎಲ್ಲಾ ತಂತ್ರಾಂಶಗಳನ್ನು ಒಂದೇ ಕಡೆ (**Integrated Single Dashboard**) ತರಲು **Indian Centre For Social Transformation, Bengaluru** ಇವರೊಂದಿಗೆ ಒಡಂಬಡಿಕೆ ಮಾಡಿಕೊಳ್ಳುವ ಬಗ್ಗೆ.

ಓದಲಾಗಿದೆ:- (1) ದಿನಾಂಕ:26.08.2016ರಂದು ಸರ್ಕಾರದ ಪ್ರಧಾನ ಕಾರ್ಯದರ್ಶಿ, ಆಕುಕ ಇಲಾಖೆ ಇವರ ಅಧ್ಯಕ್ಷತೆಯಲ್ಲಿ ನಡೆದ ಸಭೆ ಹಾಗೂ ಯೋಜನಾ ನಿರ್ದೇಶಕರು (ಆರ್.ಸಿ.ಹೆಚ್) ಇವರ ಅಧ್ಯಕ್ಷತೆಯಲ್ಲಿ ನಡೆದ ಸಭೆ

(2) ಆಯುಕ್ತರು, ಆಕುಕ ಸೇವೆಗಳು ಇವರ ಏಕ ಕಡತ ಸಂಖ್ಯೆ: **DD(CH)53/2016-17.**

*****

<u>ಪ್ರಸ್ತಾವನೆ:</u>

ಮೇಲೆ ಓದಲಾದ ಕ್ರಮ ಸಂಖ್ಯೆ: (1) ರಲ್ಲಿ ಸರ್ಕಾರದ ಪ್ರಧಾನ ಕಾರ್ಯದರ್ಶಿ, ಆಕುಕ ಇಲಾಖೆ ಇವರ ಅಧ್ಯಕ್ಷತೆಯಲ್ಲಿ ದಿನಾಂಕ: 26.08.2016 ರಂದು **GPMS Transportal Software Incorporation into the e-Health Services of the Department** ಕುರಿತು ಸಭೆ ನಡೆಸಲಾಯಿತು. ತದನಂತರ, ಯೋಜನಾ ನಿರ್ದೇಶಕರು (ಆರ್.ಸಿ.ಹೆಚ್) ಇವರ ಅಧ್ಯಕ್ಷತೆಯಲ್ಲಿ ಆಕುಕ ಇಲಾಖೆಯ ಇ-ಸೇವೆಗಳನ್ನು ಕ್ರೋಢೀಕರಿಸುವ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳೊಡನೆ ಸುದೀರ್ಘ ಚರ್ಚೆ ನಡೆಸಲಾಯಿತು.

ಅದರಂತೆ, ಮೇಲೆ ಓದಲಾದ ಕ್ರಮ ಸಂಖ್ಯೆ(2) ರಲ್ಲಿ ಆಯುಕ್ತರು, ಆಕುಕ ಸೇವೆಗಳು ಇವರು ಪ್ರಸ್ತಾವನೆಯನ್ನು ಏಕಕಡತದಲ್ಲಿ ಸಲ್ಲಿಸಿರುತ್ತಾರೆ.

ದಿನಾಂಕ:15.04.2017 ರಂದು ಪ್ರಧಾನ ಕಾರ್ಯದರ್ಶಿ, ಆಕುಕ ಇಲಾಖೆ ಹಾಗೂ ಉಪ ನಿರ್ದೇಶಕರು (ಮಕ್ಕಳ ಆರೋಗ್ಯ) ಇವರ ಸಮ್ಮುಖದಲ್ಲಿ **Indian Centre For Social Transformation,** ಬೆಂಗಳೂರು ಸಂಸ್ಥೆಯು ಆರೋಗ್ಯ ಇಲಾಖೆಯ ಎಲ್ಲಾ ತಂತ್ರಾಂಶಗಳನ್ನು ಕ್ರೋಢೀಕರಿಸಿ **Integrated Single Dashboard** ಕಾರ್ಯಗತಗೊಳಿಸುವ ವಿವರವಾದ ಪ್ರಸ್ತುತಿಯನ್ನು ನೀಡಿರುತ್ತಾರೆ. ಈ ತಂತ್ರಾಂಶಗಳನ್ನು ಕ್ರೋಢೀಕರಿಸುವುದರಿಂದ **single dashboard** ನಲ್ಲಿ ಇಲಾಖೆಯ / ಸಾರ್ವಜನಿಕರುಗಳ/ರೋಗಿಗಳ ಸಂಪೂರ್ಣ ಮಾಹಿತಿಯನ್ನು (ರಾಜ್ಯ/ಜಿಲ್ಲಾ/ತಾಲ್ಲೂಕುವಾರು/ ಸಮುದಾಯ ಆರೋಗ್ಯ ಕೇಂದ್ರ/ಪ್ರಾಥಮಿಕ ಆರೋಗ್ಯ ಕೇಂದ್ರಗಳ) ಪ್ರತಿಯೊಬ್ಬರು ಎಲ್ಲಾ ಹಂತದಲ್ಲಿಯೂ ಪಡೆಯಬಹುದಾಗಿದೆ.

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಲ್ಲಿನ ಈಗಾಗಲೇ ಚಾಲ್ತಿಯಲ್ಲಿರುವ ಈ ಕೆಳಕಂಡ ತಂತ್ರಾಂಶಗಳನ್ನು **integrate** ಮಾಡುವ ಅವಶ್ಯಕತೆ ಇರುತ್ತದೆ:-

(1) **e-Hospital**

(2) **Health Management Information System (HMIS)**

(3) **Mother and Child Tracking System (MCTS)**

(4) **ASHA Soft**

(5) **Integrated Disease Surveillance Programme (IDSP)**

(6) **Non Communicable Diseases (NCD)**

(7) **Rastriya Bala Swasthya Karyakram (RBSK)**

(8) **Special Neonatal Care Unit (SNCU)**

(9) **Primary Health Centre Management Information System (PHC MIS)**

(10) **e-Aarogya software for ANMs**

(11) **Telemedicine Software**

(12) **Disability Software (Aids for the Specially abled)**

(13) **Universal Health Coverage (UHC) – Aadhaar Integrated Smartcard**

(14) **Suvarna Aarogya Suraksha Trust IT application (Assurance Scheme)**

(15) **Mukhyamantri Santhvana Harish Scheme (MSHS)**

(16) **Rastriya Swaswthya Bima Yojane (RSBY)**

(17) **Drug Inventory Management System**

(18) **e-Kirana (Tele-radiology)**

(19) **Jeeva Sanjeevini (Blood Bank Management System)**

ಈ ಎಲ್ಲಾ ತಂತ್ರಾಂಶಗಳನ್ನು ಕ್ರೂಢೀಕರಿಸಲು ಕೆಲವು ಸಂಸ್ಥೆಗಳಿಂದ ಪ್ರಾಯೋಗಿಕ ಕಾರ್ಯವನ್ನು ನಡೆಸಲಾಗಿದ್ದು, ಇದಕ್ಕಾಗಿ ಹಲವು ಕೋಟಿ ರೂಪಾಯಿಗಳ ವೆಚ್ಚವಾಗುತ್ತದೆಂದು ತಿಳಿಸಿರುತ್ತಾರೆ ಹಾಗೂ NIC ಸಂಸ್ಥೆಯು ತಂತ್ರಾಂಶಗಳನ್ನು ಕ್ರೂಢೀಕರಿಸುವ ಸದರಿ ಪ್ರಸ್ತಾವನೆಗೆ ಯಾವುದೇ ಪ್ರತಿಕ್ರಿಯೆ ನೀಡಿರುವುದಿಲ್ಲ. ಆದರೆ, **Indian Centre For Social Transformation, Bengaluru,** ಸಂಸ್ಥೆಯು ಆರೋಗ್ಯ ಇಲಾಖೆಯ ಎಲ್ಲಾ ತಂತ್ರಾಂಶಗಳನ್ನು ಒಂದೇಕಡೆ (**Integrated Dashboard**) ತರಲು ಅವಶ್ಯವಿರುವ ಸಾಫ್ಟವೇರ್‌ನ್ನು ಹೊಂದಿದ್ದು, ರೂ.5.00 ಲಕ್ಷಗಳನ್ನು ಮಾತ್ರ **Cloud Computing** ಸೇವೆಗೆ ನಿಗದಿಪಡಿಸಿರುತ್ತಾರೆ ಹಾಗೂ ಸದರಿ ಸಂಸ್ಥೆಯು ಈಗಾಗಲೇ ಪಶುಸಂಗೋಪನಾ ಮಂತ್ರಾಲಯ, ಭಾರತ

ಸರ್ಕಾರದ ಯೋಜನೆಯಾದ **e-Pashu** (**www.epashuhaat.gov.in**) ತಂತ್ರಾಂಶವನ್ನು ಯಶಸ್ವಿಯಾಗಿ ಎಲ್ಲಾ ರಾಜ್ಯಗಳಲ್ಲೂ ಕಾರ್ಯಗತಗೊಳಿಸಿರುತ್ತಾರೆ.

**Indian Centre for Social Transformation (ICST), Bengaluru,** ಸಂಸ್ಥೆಯು ನೊಂದಾಯಿತ ಸಾರ್ವಜನಿಕ ದತ್ತಿ ಟ್ರಸ್ಟ್ (ರಿಜಿಸ್ಟ್ರೇಷನ್ ಸಂ:**HLS-4-00228-2009-10,** ದಿನಾಂಕ:**26.12.2009**) ಆಗಿದ್ದು, ಸಾಫ್ಟ್‌ವೇರ್ ಕ್ಷೇತ್ರದಲ್ಲಿ ಉತ್ತಮ ಪರಿಣಿತಿಯನ್ನು ಹೊಂದಿರುವ ಸಂಸ್ಥೆಯಾಗಿದ್ದು, ಭಾರತದ ಸಂವಿಧಾನದ ಅನುಚ್ಛೇದ **51A (j)** ರಲ್ಲಿ ನಮೂದಿಸಿರುವಂತೆ (**Article 51A (j) of the Indian Constitution prescribes the Fundamental Duty for Indian Citizens and exhorts them "to strive towards excellence in all spheres of individual and collective activity so that the nation constantly rises to higher levels of endeavour and achievement"**) ರಾಷ್ಟ್ರೀಯ ದೃಷ್ಟಿಕೋನವನ್ನು ಸಾಧಿಸುವುದರ ಕಡೆಗೆ ಕೆಲಸ ಮಾಡುವ ಉದ್ದೇಶವನ್ನು ಹೊಂದಿರುತ್ತದೆ. ಸದರಿ ಸಂಸ್ಥೆಯು ಅತ್ಯುತ್ತಮ ಆಚರಣೆಗಳು, ಜ್ಞಾನ ನಿರ್ವಹಣಾ ವ್ಯವಸ್ಥೆಗಳು ಮತ್ತು ಪರಿಣಾಮಕಾರಿ ಹಾಗೂ ನಿರ್ಧಾರಿತ ಅಪ್ಲಕೇಷನ್‌ಗಳನ್ನು ಕೈಗೆಟುಕುವ ದರದಲ್ಲಿ **"One Stop Portal"** ಮುಖಾಂತರ ಭಾರತದಾದ್ಯಂತ ತಲುಪಿಸುವ ಗುರಿ ಹೊಂದಿದೆ. ಸದರಿ ಸಂಸ್ಥೆಯು **"IT for Social Change"** ನಲ್ಲಿ ನಂಬಿಕೆ ಹೊಂದಿದ್ದು, ಈ ಸಂಸ್ಥೆಯಲ್ಲಿ ನಾಗರೀಕ ಸೇವೆ ಮತ್ತು ಕೈಗಾರಿಕಾ ಉದ್ಯಮದಲ್ಲಿ ಪರಿಣಿತಿ ಹೊಂದಿದವರು ಕೆಲಸ ನಿರ್ವಹಿಸುತ್ತಿದ್ದು, ಶ್ರೀ ಆರ್. ಶ್ರೀಕುಮಾರ್, ನಿವೃತ್ತ ಪೊಲೀಸ್ ಮಹಾನಿರ್ದೇಶಕರು ಇದರ ಸಂಸ್ಥಾಪಕರಾಗಿರುತ್ತಾರೆ.

**ICST** ಯ ಸಾಧನೆಗಳು (ಇಲ್ಲಿಯವರೆಗೆ)

| Sl. No | Sectors | Name of the Organization | Implementation across India |
|---|---|---|---|
| 1 | City Government | Bruhat Bengaluru Mahanagara Paalike (BBMP) | GPMS-FMS-HealthCare at 3rd largest municipality of India |
| 2 | Education | Bangalore University (BU) | Examination Reforms for 3,00,000 students |
| 3 | Ministry Schemes Implementation | National Productivity Council (NPC) | Project Monitoring for Minority Students Scholarships |
| 4 | Construction/ Infrastructure | State Govt. of Bihar | IAY Bihar – Indira Awas Yojana – 30 Lakhs plus BPL Families/ Beneficiaries online |
| 5 | Surface | National Highway | Project Monitoring of |

| | | | |
|---|---|---|---|
| | Transport | Authority of India (NHAI) | the roads across the States of India |
| 6 | Healthcare | Basavatarakam Indo American Cancer Hospital & Research Institute | A low cost, high value added solution for a 500 plus bedded Super Speciality Cancer Hospital |

ಈ ಹಿನ್ನೆಲೆಯಲ್ಲಿ, ಆರೋಗ್ಯ ಇಲಾಖೆಯ ಎಲ್ಲಾ ತಂತ್ರಾಂಶಗಳನ್ನು ಒಂದೇ ಕಡೆ ಕ್ರೂಢೀಕರಿಸುವ ತಂತ್ರಾಂಶವನ್ನು ಹೊಂದಿರುವ ಏಕಮಾತ್ರ ಸಂಸ್ಥೆಯಾದ್ದರಿಂದ, ಸದರಿ ಸಂಸ್ಥೆಯ ಪ್ರಸ್ತಾವನೆಯನ್ನು ಪರಿಶೀಲಿಸಿ ಪ್ರಸ್ತಾವನೆಯನ್ನು ಕಾರ್ಯಗತಗೊಳಿಸಲು ಸೂಚಿಸಲಾಯಿತು.

ಅದರಂತೆ, ಈ ಕಾರ್ಯಕ್ರಮದ ಅನುಷ್ಠಾನಕ್ಕಾಗಿ **Indian Centre for Social Transformation, Bengaluru,** ಈ ಸಂಸ್ಥೆಯೊಂದಿಗೆ ಒಡಂಬಂಡಿಕೆ ಮಾಡಿಕೊಳ್ಳಲು ತೀರ್ಮಾನಿಸಿ ಈ ಕೆಳಕಂಡಂತೆ, ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: ಆಕುಕ 76 ಎಫ್‌ಪಿಇ 2017,**

**ಬೆಂಗಳೂರು, ದಿನಾಂಕ: –5–2017**

ಪ್ರಸ್ತಾವನೆಯಲ್ಲಿ ವಿವರಿಸಿರುವಂತೆ, ಈಗಾಗಲೇ ಚಾಲ್ತಿಯಲ್ಲಿರುವ ಆರೋಗ್ಯ ಇಲಾಖೆಯ ಎಲ್ಲಾ ತಂತ್ರಾಂಶಗಳನ್ನು ಒಂದೇ ಕಡೆ **(Integrated Single Dashboard)** ತರುವ ಸಲುವಾಗಿ ಕರ್ನಾಟಕ ಪಾರದರ್ಶಕತೆ ಮತ್ತು ಸಾರ್ವಜನಿಕ ಸಂಗ್ರಹಣೆ ನಿಯಮ 2000ದ ಭಾಗ–7A ರ 28E (iii) **(Single source selection)**ರನ್ವಯ ರೂ.5.00 ಲಕ್ಷ ಮೊತ್ತವನ್ನು ಒದಗಿಸಿ, **Indian Centre For Social Transformaction, Bengaluru,** ಸಂಸ್ಥೆಯೊಂದಿಗೆ ಒಡಂಬಂಡಿಕೆ ಮಾಡಿಕೊಳ್ಳಲು ಮತ್ತು ಈ ಒಡಂಬಡಿಕೆ ಅವಧಿಯು ಒಡಂಬಡಿಕೆಯನ್ನು ಸಹಿಮಾಡಿದ ದಿನ ಅಂದರೆ ದಿ:27–04–2017 ರಿಂದ ಜಾರಿಗೆ ಬರುವಂತೆ 10 ವರ್ಷಗಳ ಅವಧಿಗೆ (ದಿನಾಂಕ: 27–04–2027 ರವರೆಗೆ) ಸರ್ಕಾರವು ಅನುಮೋದನೆ ನೀಡಿದೆ.

ಅದರಂತೆ, ತಂತ್ರಾಂಶ ಕ್ರೋಢೀಕರಣ ಕಾರ್ಯವನ್ನು ಈ ಕೆಳಕಂಡ ಅವಧಿಯೊಳಗೆ ಜಾರಿಗೆ ತರತಕ್ಕದ್ದು:-

| ಕ್ರ.ಸಂ. | ವಿವರಗಳು | ಕಾಲ ಮಿತಿ | ಹಣ ಪಾವತಿ (ರೂ ಗಳಲ್ಲಿ) |
|---|---|---|---|
| 1 | ಹಂತ–1 :<br>ಆ.ಕು.ಕ ಇಲಾಖೆಯು ಅವಶ್ಯಕತೆಯಿರುವ ಮಾಹಿತಿಯನ್ನು **(Hospital & Doctors information, Software APIs, Integration Plan)** ICST ರವರಿಗೆ ನೀಡುವುದು. | 15ನೇ ಮೇ, 2017 | 2.0 ಲಕ್ಷ (ಮುಂಗಡ ಹಣ) |
| 2 | ಹಂತ–2 :<br>**Integrated Single Dashboard** ಲೋಕಾರ್ಪಣೆ (ಪ್ರಮುಖ ಸೂಚಕಗಳಾದ **HMIS, MCTS, ASHA SOFT, SNCU, IDSP, NCD,** | 1ನೇ ಜೂನ್, 2017 | 1.0 ಲಕ್ಷ |

| | | | |
|---|---|---|---|
| | **RBSK, RSBY, SAST, NSHS, Disability Software, Drug Inventory, Teleradiology, Jeeva Sanjeevini** ಗಳ ಕ್ರೋಢೀಕರಣ, **Doctors and Hospital details – Designation/Address/Contact Nos.** ಹಾಗೂ ವಿಶೇಷವಾಗಿ **Universal Health Coverage - Electronic Health Record.** | | |
| 3 | ಹಂತ–3 :<br>**e-Hospital, PHC MIS, e-Aarogya, Telemedicine** | 31ನೇ ಆಗಸ್ಟ್, 2017 | 1.0 ಲಕ್ಷ |
| 4 | ಹಂತ–4 :<br>• **Project Management Unit (PMU)** ರಚಿಸುವುದು<br>• ಸಾಫ್ಟ್‌ವೇರ್‌ನ ಸಂಪೂರ್ಣ **source code** ನ್ನು ಇಲಾಖೆಗೆ ನೀಡುವುದು<br>• ಪೋರ್ಟಲ್‌ನ್ನು **Security Audit** ಮಾಡಿ ಕರ್ನಾಟಕ ರಾಜ್ಯ ಮಾಹಿತಿ ಕೇಂದ್ರ **(Karnataka State Data Centre - KSDC)** ಕ್ಕೆ ವರ್ಗಾಯಿಸುವುದು. | 30ನೇ ಅಕ್ಟೋಬರ್, 2017 | 1.0 ಲಕ್ಷ |

ಈ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸುವ ನಿಟ್ಟಿನಲ್ಲಿ ಸೇವಾದಾರರು ಸರ್ಕಾರದೊಂದಿಗೆ ಒಡಂಬಡಿಕೆ ಪತ್ರದಲ್ಲಿ ಮಾಡಿಕೊಂಡಿರುವ ಎಲ್ಲಾ ಷರತ್ತು ಮತ್ತು ನಿಬಂಧನೆಗಳಿಗೆ ಬದ್ಧರಾಗಿರುತ್ತಾರೆ. ಷರತ್ತು ಮತ್ತು ನಿಬಂಧನೆಗಳನ್ನು ಉಲ್ಲಂಘಿಸಿದ ಪಕ್ಷದಲ್ಲಿ ಒಡಂಬಡಿಕೆ ಪತ್ರದ ಕಂಡಿಕೆ–7ರಲ್ಲಿ ವಿಧಿಸಿರುವ ಷರತ್ತಿನಂತೆ ಒಪ್ಪಂದವು ನಿರಸನಗೊಳ್ಳುತ್ತದೆ.

ಈ ಆದೇಶವನ್ನು ಕಾನೂನು ಕೋಶದ ಸಹಮತಿಯನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು
ಅವರ ಹೆಸರಿನಲ್ಲಿ,

(ಎಸ್.ವಿ.ಕಲಾವತಿ)
ಸರ್ಕಾರದ ಅಧೀನ ಕಾರ್ಯದರ್ಶಿ
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ.

<u>ಇವರಿಗೆ:</u>

1. ಪ್ರಧಾನ ಮಹಾಲೇಖಪಾಲರು (ಲೆಕ್ಕಪತ್ರ & ಪರಿಶೋಧನೆ), ಕರ್ನಾಟಕ ಬೆಂಗಳೂರು.
2. ಆಯುಕ್ತರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು, ಆನಂದರಾವ್ ವೃತ್ತ, ಬೆಂಗಳೂರು.
3. ಅಭಿಯಾನ ನಿರ್ದೇಶಕರು, ರಾಷ್ಟ್ರೀಯ ಆರೋಗ್ಯ ಅಭಿಯಾನ, ಬೆಂಗಳೂರು.
4. ನಿರ್ದೇಶಕರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು, ಆನಂದರಾವ್ ವೃತ್ತ, ಬೆಂಗಳೂರು.

5. **ಯೋಜನಾ ನಿರ್ದೇಶಕರು(ಆರ್.ಸಿ.ಹೆಚ್.), ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು, ಆನಂದರಾವ್ ವೃತ್ತ, ಬೆಂಗಳೂರು.**
6. **ಉಪ ನಿರ್ದೇಶಕರು, ಮಕ್ಕಳ ಆರೋಗ್ಯ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು,** ಆನಂದರಾವ್ ವೃತ್ತ, ಬೆಂಗಳೂರು.
7. **ಉಪ ನಿರ್ದೇಶಕರು, ವೈದ್ಯಕೀಯ-2 ಹಾಗೂ ನೋಡಲ್ ಅಧಿಕಾರಿ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು, ಆನಂದರಾವ್ ವೃತ್ತ, ಬೆಂಗಳೂರು.**
8. **ನಿರ್ದೇಶಕರು, ರಾಜ್ಯ ಹುಜೂರ್ ಖಜಾನೆ ನಿರ್ದೇಶನಾಲಯ, ಬೆಂಗಳೂರು.**
9. **ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ (ವೆಚ್ಚ-5), ವಿಧಾನ ಸೌಧ, ಬೆಂಗಳೂರು.**
10. The Founder Trustee, Indian Centre For Social Transformaction, Bengaluru,
11. **ಶಾಖಾ ರಕ್ಷಾ ಕಡತ : ಹೆಚ್ಚುವರಿ ಪ್ರತಿಗಳು.**

**ಪ್ರತಿ ಮಾಹಿತಿಗಾಗಿ:**

1. ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಕಾಸ ಸೌಧ, ಬೆಂಗಳೂರು.
2. **ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ರವರ ಆಪ್ತ ಕಾರ್ಯದರ್ಶಿ, ವಿಕಾಸ ಸೌಧ, ಬೆಂಗಳೂರು.**
3. **ಸರ್ಕಾರದ ಉಪ ಕಾರ್ಯದರ್ಶಿ-2ರವರ ಆಪ್ತ ಕಾರ್ಯದರ್ಶಿ, ವಿಕಾಸ ಸೌಧ, ಬೆಂಗಳೂರು.**